**ಸಾಕ್ಷಿಯನ್ನು ದಿಃ05.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನೀವು ಹಾಕಿದ ಲಿಖಿತ ಹೇಳಿಕೆಯಲ್ಲಿ ವಿಲ್ ಬಗ್ಗೆ ಬರೆದಿಲ್ಲ ಎಂದರೆ, ಹೌದು, ಅದು ಲೇಟಾಗಿ ಸಿಕ್ಕಿದೆ ಎಂದು ನುಡಿಯುತ್ತಾರೆ. ನಮಗೆ ವಿಲ್ ಸಿಕ್ಕು ಒಂದು ತಿಂಗಳಾಯಿತು. ಹೋದ ತಿಂಗಳು ನಮ್ಮ ಮನೆಯಲ್ಲಿ ಏನೋ ಹುಡುಕುವಾಗ ನನಗೆ ವಿಲ್ ಪತ್ರ ಸಿಕ್ಕಿದೆ.
2. ಈ ಮೊದಲು ದಾಖಲೆಗಳನ್ನು ಹಾಜರುಪಡಿಸಿದಾಗ ವಿಲ್ ಹಾಜರುಪಡಿಸಿಲ್ಲ ಎಂದರೆ, ಜರಾಕ್ಸ್ ನೀಡಿದ್ದೇವೆ ಎಂದು ನುಡಿಯತ್ತಾರೆ. ಆ ರೀತಿ ಯಾವುದೇ ವಿಲ್ ನೀಡಿದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
3. ನಿಡಿ-21 ರ ವಿಲ್ ನಲ್ಲಿ ಇರುವ ಪುಟ್ಟಮ್ಮರವರ ಸಹಿಯಲ್ಲಿ ಇರುವ ಎಸ್ ಎಂಬ ಅಕ್ಷರವನ್ನು ಎರಡೆರಡು ಬಾರಿ ತಿದ್ದಲಾಗಿದೆ ಎಂದರೆ, ಹೌದು.

4. ಸದರಿ ವಿಲ್ ಬರೆಯುವಾಗ ನೀವು ಹಾಜರಿದ್ದೀರಾ ಎಂದರೆ, ಇಲ್ಲ. ಅದನ್ನು ಬರೆಸುವಾಗ ನನಗೆ ಗೊತ್ತಿರಲಿಲ್ಲ.

5. ನಿಪಿ - 21 ರಲ್ಲಿರುವ ಸಹಿ ಪುಟ್ಟಮ್ಮನವರ ಸಹಿ ಅಲ್ಲ ಎಂದರೆ ಸರಿಯಲ್ಲ.

6. ನಿಪಿ-21 ರಲ್ಲಿರುವ ಸಾಕ್ಷಿದಾರರು ಸಹಿ ಮಾಡಿಲ್ಲ ನೀವು ಸಾಕ್ಷಿದಾರರನ್ನು ಸೃಷ್ಠಿ ಮಾಡಿಕೊಂಡು ಪತ್ರ ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ಈ ದಾವೆಯು ವಾದ ವಿವಾದಕ್ಕೆ ಬಂದ ಹಂತದಲ್ಲಿ ವಾದಿಗೆ ತೊಂದರೆ ಕೊಡಲು ಪತ್ರಬರಹಾರರನ್ನು ಭೇಟಿ ಮಾಡಿ ಹಳೆ ಪತ್ರ ಖರೀದಿಸಿ ನಿಮ್ಮ ಅಜ್ಜಿ ಪುಟ್ಟಮ್ಮ ಹಾಗೂ ಸಾಕ್ಷಿದಾರರ ಸಹಿಗಳನ್ನು ವಾದಿಯ ಭಾಗಾಂಶಕ್ಕೆ ತೊಂದರೆ ಕೊಡುವ ಸಲುವಾಗಿ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ. ಅದನ್ನು ವೆಂಡರ್ ರವರು ಬರೆಯವುದನ್ನು ನಾನು ನೋಡಿಲ್ಲ ಎಂದರೆ ಸರಿ.

8. ನಿಪಿ - 21 ಇತ್ತೀಚೆಗೆ ಸಿಕ್ಕಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

9. ನಿಮ್ಮ ಅಜ್ಜಿ ಮೃತರಾಗುವ ಸಮಯದಲ್ಲಿ ಯಾರ ಬಳಿ ಇದ್ದರು ಎಂದರೆ, ಅನಾಥಾಶ್ರಮದಲ್ಲಿ ಮೃತರಾಗಿದ್ದಾರೆ.

10. ನಾಗಣ್ಣ, ರಾಜಶೇಖರ ಹಾಗೂ ಉಮೇಶರವರನ್ನು ಸಾಕ್ಷಿ ಮಾಡಿಸಲು ತೊಂದರೆ ಇದೆಯಾ ಎಂದರೆ, ಅವರು ಬೇಕಾಗಿಲ್ಲ ಎಂದು ನುಡಿಯುತ್ತಾರೆ. ವಾಸುದೇವರವರನ್ನು ವಿಚಾರಣೆ ಮಾಡಿಸುತ್ತೀರಾ ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

11. ಪುಟ್ಟಮ್ಮನವರು ಜೀವಂತವಾಗಿದ್ದಾಗ ಯಾವುದೇ ವಿಲ್ ಮಾಡದಿದ್ದರೂ ಸುಳ್ಳು ದಾಖಲೆ ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ